**ಹುಬ್ಬಳ್ಳಿ ಕೃಷಿ ಮಾರುಕಟ್ಟೆ ಕುರಿತು**

1987 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಹುಬ್ಬಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಅಮರಗೋಳದಹೊಸ ಸಂಕೀರ್ಣಕ್ಕೆ ಪೂರ್ತಿಸ್ಥಳಾಂತರಗೊಂಡಿದೆಯೇ ?*

ಆ) *ಅಮರಗೋಳ ಮಾರುಕಟ್ಟೆಯಲ್ಲಿ ಎಷ್ಟು ಕಛೇರಿ ಉಗ್ರಾಣಗಳನ್ನು ಕಟ್ಟಲಾಗಿದೆ. ಯಾವ ಆಧಾರದ ಮೇಲೆ ಅವುಗಳನ್ನು ವರ್ತಕರಿಗೆ ನೀಡಲಾಗಿದೆ ?*

ಇ) *ನ್ಯೂಕಾಟನ್ ಮಾರ್ಕೆಟನಿಂದ ಹೊಸ ಎ.ಪಿ.ಎಂ.ಸಿ. ಸಂಕೀರ್ಣಕ್ಕೆ ಇನ್ನು ಎಷ್ಟು ವರ್ತಕರು ಸ್ಥಳಾಂತರಗೊಳ್ಳಬೇಕಾಗಿದೆ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು ?*

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹತ್ತಿ ವ್ಯವಹಾರವನ್ನು ಸಂಪೂರ್ಣವಾಗಿ ಸ್ಥಳಾಂತರಿಸಿದೆ. ಉಳಿದಂತೆ ಇತರ ವ್ಯವಹಾರವನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) 201 ಅಂಗಡಿ-ವ-ಗೋದಾಮುಗಳನ್ನು ನೂತನ ಅಮರಗೋಳ ಮಾರುಕಟ್ಟೆ ಪ್ರಾಂಗಣದಲ್ಲಿ ಕಟ್ಟಲಾಗಿದೆ. ಅವುಗಳನ್ನು ಸಮಿತಿಯಿಂದ ಲೈಸನ್ಸ ಪಡೆದ ವರ್ತಕರಿಗೆ ಅವರು ಕ್ರಮಪಡಿಸಿದ ಹುಟ್ಟುವಳಿಗಳಲ್ಲಿ ನಡೆಸುವ ವ್ಯವಹಾರದ ಆಧಾರದ ಮೇಲೆ, ಲೀಸ್-ಕಂ-ಸೇಲ್ ಆಧಾರದ ಮೇಲೆ 144 ಅಂಗಡಿ-ವ-ಗೋದಾಮುಗಳನ್ನು ವಿತರಣೆ ಮಾಡಲಾಗಿದೆ.

ಇ) 50 ಜನ ಕ್ರಮಪಡಿಸಿದ ಹುಟ್ಟುವಳಿಗಳಲ್ಲಿ ವ್ಯಾಪಾರ ಮಾಡುವ ದಲ್ಲಾಲರು, ಮತ್ತು 49 ಜನ ಆಲುಗಡ್ಡೆ, ಉಳ್ಳಾಗಡೆ ವ್ಯಾಪಾರ ಮಾಡುವವರು ಹಾಗೂ 42 ಜನ ಇತರೆ ಕ್ರಮಪಡಿಸಿದ ಹುಟ್ಟುವಳಿಗಳಲ್ಲಿ ವ್ಯವಹಾರ ಹರುಸಿಸುತ್ತಿರುವ ಅರ್ಹ ಖರೀದಿದಾರರ ವ್ಯವಹಾರಗಳನ್ನು ಅಮರಗೋಳ ಮಾರುಕಟ್ಟೆ ಪ್ರಾಂಗಣಕ್ಕೆ ಸ್ಥಳಾಂತರಿಸಬೇಕಾಗಿದೆ. ಅರ್ಹ ದಲ್ಲಾಲರಿಗೆ ನಿಯಮಾನುಸಾರ ನಿವೇಶನಗಳನ್ನು ಹಂಚಲು ಕ್ರಮಕೈಗೊಳ್ಳಲಾಗುತ್ತಿದೆ.

**ಕರ್ನಾಟಕ ಕಾರ್ಮಿಕ ಕಲ್ಯಾಣಮಂಡಳಿಯ ಸದಸ್ಯರ ನೇಮಕಾತಿ**

1989 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕಳೆದ 5 ವರ್ಷದ ಸದಸ್ಯರ ಪಟ್ಟಿ ಒದಗಿಸುವುದು. ಅವರು ಪ್ರತಿನಿಧಿಸುವ ಸಂಸ್ಥೆಗಳಾವುವು ?*

ಆ) *ಇದರ ಅವಧಿ ಎಷ್ಟು ? ಇವರನ್ನು ನೇಮಕ ಮಾಡುವಾಗ ಯಾವ ನಿಯಮಾವಳಿಯನ್ನು ಅನುಸರಿಸಲಾಗುತ್ತಿದೆ ?*

*ಇ) ಕಾರ್ಮಿಕ ಮತ್ತು ಕಾರ್ಮಿಕ ಸಂಘದ ಪ್ರತಿನಿಧಿಗಳನ್ನು ನೇಮಕ ಮಾಡುವಾಗ ಯಾವ ಅರ್ಹತೆಗಳನ್ನು ಪರಿಗಣಿಸಲಾಗುತ್ತಿದೆ?*

*ಈ) ಕೇಂದ್ರ ಸರ್ಕಾರ ಅತೀ ದೊಡ್ಡ ಕಾರ್ಮಿಕ ಸಂಘಟನೆ ಎಂದು ಪರಿಗಣಿಸಿರುವ ಭಾರತೀಯ ಮಜ್ದೂರ್ ಸಂಘವನ್ನು ಏಕೆ ಮಂಡಳಿಯಿಂದ ಕೈಬಿಡಲಾಗಿದೆ?*

*ಉ) ಕಳೆದ ಹತ್ತಾರು ವರ್ಷಗಳಿಂದ ಪ್ರತಿನಿಧಿಯಾಗಿದ್ದ ಭಾರತೀಯ ಮಜ್ದೂರ್ ಸಂಘವನ್ನು ಈ ಭಾರಿ ಯಾವ ಕಾರಣಕ್ಕಾಗಿ ಕೈ ಬಿಡಲಾಗಿದೆ?*

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) ಸದಸ್ಯರ ಪಟ್ಟಿ ಮತ್ತು ಪ್ರತಿನಿಧಿಸಿರುವ ಸಂಸ್ಥೆಗಳ ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ 1 ರಲ್ಲಿ ಒದಗಿಸಿದೆ.

ಆ) ಮಂಡಳಿಯ ಸದಸ್ಯರ ಅವಧಿಯು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ 1965ರ ಕಲಂ 4(4) ರನ್ವಯ ಗೆಜೆಟನಲ್ಲಿ ಅವರ ಹೆಸರುಗಳು ಪ್ರಕಟವಾದ ದಿನಂಕಾದಿಂದ 3 ವರ್ಷಗಳು ಸದಸ್ಯರನ್ನು ನೇಮಕ ಮಾಡಲು ಸದರೀ ಕಾಯ್ದೆಯ ಕಲಂ 4 ಮತ್ತು ನಿಯಮ 10ರಲ್ಲಿನ ನಿಯಮಾವಳಿಗಳನ್ನು ಅನುಸರಿಸಲಾಗುತ್ತಿದೆ.

ಇ) ಕಾರ್ಮಿಕ ಸಂಘಗಳಲ್ಲಿನ ಅರ್ಹ ಮುಂದಾಳುಗಳನ್ನು ಅಥವಾ ಕಾರ್ಮಿಕ ಕ್ಷೇತ್ರದಲ್ಲಿ ಕಾರ್ಮಿಕರ ಹಿತಕ್ಕಾಗಿ ಶ್ರಮಿಸುವ ಮುಖಂಡರನ್ನು ಗುರುತಿಸಿ, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ 1965ರ ಕಲಂ 5ರ ಪ್ರಕಾರ ಪರಿಶೀಲಿಸಿ ಅರ್ಹರಾಗಿರುವವರಲ್ಲಿ ಯಾರನ್ನಾದರೂ ನೇಮಿಸಲು ಸರ್ಕಾರದ ವಿವೇಚನೆಗೆ ಬಿಟ್ಟ ವಿಷಯವಾಗಿದೆ.

ಈ) ಮಂಡಳಿಯ ಸದಸ್ಯರು ಅತಿ ದೊಡ್ಡ ಕಾರ್ಮಿಕ ಸಂಘದಿಂದ ಅಥವಾ ಅತಿ ಸಣ್ಣ ಕಾರ್ಮಿಕ ಸಂಘದಿಂದಲೇ ಇರಬೇಕೆಂಬ ನಿಯಮ ಕಾಯ್ದೆಯಡಿಯಲ್ಲಿ ಇರುವುದಿಲ್ಲ. ಇದು ಸರ್ಕಾರದ ವಿವೇಜನೆಗೆ ಬಿಟ್ಟ ವಿಷಯವಾಗಿದೆ.

ಉ) ಭಾರತೀಯ ಮಜ್ದೂರ್ ಸಂಘದ ಅಧ್ಯಕ್ಷರು ತಮ್ಮ ಸದಸ್ಯತ್ವವನ್ನು ಮಂಡಳಿಯು ಕೈಬಿಟ್ಟಿರುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ : ಕಾ ಇ 248 ಎಲ್‌ಇಟಿ 94 ದಿನಾಂಕ : 21.3.95ನ್ನು ಪ್ರಶ್ನಿಸಿ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ (ಸಂಖ್ಯೆ : 19355 : 95) ಸಲ್ಲಿಸಿದ್ದು, ಸದರೀ ಪ್ರಕರಣ ನ್ಯಾಯಾಲಯದಲ್ಲಿ ಇನ್ನೂ ಇತ್ಯರ್ಥಗೊಂಡಿರುವುದಿಲ್ಲ.

**ಅಧಿಸೂಚನೆ ನಂ. ಎನ್.ಡಬ್ಲ್ಯೂ.ಎಲ್ 95 ಎಲ್.ಇ.ಟಿ. 90 ದಿನಾಂಕ 3.5.91ರ ಪ್ರಕಾರ**

**I. ಮಾಲೀಕರ ಪ್ರತಿನಿಧಿಗಳು**

1. ಶ್ರೀ ನರಸಪ್ಪಾ, ಮಾಜಿ ಶಾಸಕರು, ಗುರುಮಿಠಕಲ್, ಯಾದಗಿರ್, ಗುಲ್ಬರ್ಗಾ ಜಿಲ್ಲೆ.
2. ಗ್ರೇಟರ್ ಮೈಸೂರು ಛೇಂಬರ್ ಆಫ್ ಇಂಡಸ್ಟ್ರೀಸಿ, 3ನೇ ಮಹಡಿ, 14ನೇ ಕನ್ನಿಂಗ್ ಹ್ಯಾಮ್ ರೋಡ್, ಬೆಂಗಳೂರು ಇವರ ಪ್ರತಿನಿಧಿ.
3. ಶ್ರೀ ವಲಿಯಪ್ಪ, ವಲಿಯಪ್ಪ ಟೆಕ್ಸಟೈಲ್ಸ, ಬೆಂಗಳೂರು.
4. ಕರ್ನಾಟಕ ಬೆಳಗಾರರ ಅಸೋಸಿಯೇಷನ್, ಸಕಲೇಶಪುರ, ಹಾಸನ ಜಿಲ್ಲೆ ಇವರ ಪ್ರತಿನಿಧಿ.

**II. ನೌಕರರ ಪ್ರತಿನಿಧಿಗಳು:**

1 ಶ್ರೀ ಕೆ. ಸುಂದರಮೂರ್ತಿ, ಜನರಲ್ ಸೆಕ್ರೆಟರಿ, ಐ.ಎನ್.ಟಿ.ಯು.ಸಿ 187, ಬಿ.ಇ.ಎಂ.ಎಲ್. ಲೇಔಟ್, ಕಮಲಾನಗರ ಹತ್ತಿರ, ಬೆಂಗಳೂರು - 79.

2. ಪ್ರೆಸಿಡೆಂಟ್ ಅಥವಾ ಅವರಿಂದ ನೇಮಿಸಲ್ಪಟ್ಟವರು, ಸಿ.ಐ.ಟಿ.ಯು, ಕರ್ನಾಟಕ ಬ್ರಾಂಚ್, ಎಲ್-56, ಕೆ.ವಿ. ಟೆಂಪಲ್ ಸಟ್ಟ್ರೀಟ್, ಸುಲ್ತಾನಪೇಟೆ, ಬೆಂಗಳೂರು.

3. ಪ್ರೆಸಿಡೆಂಟ್ ಅಥವಾ ಅವರಿಂದ ನೇಮಿಸಲ್ಪಟ್ಟವರು, ಎ.ಐ.ಟಿ.ಯು.ಸಿ. ನಂ. 3 ವಿನಾಯಕ ಬಿಲ್ಡಿಂಗ್, ಸಂಪಿಗೆ ರೋಡ್, ಮಲ್ಲೇಶ್ವರಂ, ಬೆಂಗಳೂರು - 560003.

4. ಪ್ರೆಸಿಡೆಂಟ್ ಅಥವಾ ಅವರಿಂದ ನೇಮಿಸಲ್ಪಟ್ಟವರು (ಬಿ.ಎಂ.ಎಸ್ ಭಾರತೀಯ ಮಜ್ದೂರ್ ಸಂಘ, ಎನ್.ಸಿ.ರೋಡ್, ಬೆಂಗಳೂರು - 560009.

**III. ಸ್ವತಂತ್ರ ಮಹಿಳಾ ಪ್ರತಿನಿಧಿಗಳು**

1. ಶ್ರೀಮತಿ. ಮುಕ್ತಾರುನ್ನಿಸಾ ಬೇಗಂ, ಎಂ.ಎಲ್.ಸಿ., ಮೈಸೂರು.

2. ಶ್ರೀಮತಿ. ಉಮಾ ಬುಲ್ಲಣ್ಣನವರ್, ವಕೀಲರು, ಹುಬ್ಬಳ್ಳಿ.

**ಇತರೆ ಸ್ವತಂತ್ರ ಸದಸ್ಯರು**

1. ಕಾರ್ಮಿಕ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು.

2. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

3. ಕಾರ್ಮಿಕ ಆಯುಕ್ತರು, ಬೆಂಗಳೂರು.

4. ಶ್ರೀ ಪಾಟೀಲ್ ಶಿವನಗೌಡ ರುದ್ರಗೌಡ, ವಕೀಲರು, ಕೆ.ಹೆಚ್.ಬಿ. ಕಾಲೋನಿ, ಬಾಗಲ ಕೋಟೆ, ಬಿಜಾಪುರ ಜಿಲ್ಲೆ.

**ಅಧಿಸೂಚನೆ ಸಂಖ್ಯೆ ಕಾಇ 248 ಎಲೆಇಟ 94 ದಿನಾಂಕ : 15-10-1994.**

**ಮಾಲೀಕರ ಪ್ರತಿನಿಧಿಗಳು**

1. ಅಧ್ಯಕ್ಷರು ಅಥವಾ ಅವರ ಪ್ರತಿ ನಿಯೋಜಕರು, ಗ್ರೇಟರ್ ಮೈಸೂರು ಚೇಂಬರ್ ಆಫ್ ಇಂಡಸ್ಟ್ರೀಸ್ ಷರೀಫ್ ಚೇಂಬರ್ 3ನೇ ಮಹಡಿ, ನಂ. 14, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು.

2. ಶ್ರೀ ಮಾದವ ಸುವರ್ಣ, ಕಂಟ್ರಾಕ್ಟರ್, ಬಿಜಯ್ ಕಾಫಿಕಾಡ್, ವಿಬಿಜಯ್, ಮಂಗಳೂರು.

3. ಅಧ್ಯಕ್ಷರು ಅಥವಾ ಅವರ ಪ್ರತಿನಿಯೋಜಕರು, ಹುಬ್ಬಳ್ಳಿ. ಚೇಂಬರ್ ಆಫ್ ಕಾಮರ್ಸ ಅಂಡ್ ಇಂಡಸ್ಟ್ರೀಸ್ ನೆಹರು ಸ್ಟೇಡಿಯಂ ಹತ್ತಿರ, ಹುಬ್ಬಳ್ಳಿ.

4. ಅಧ್ಯಕ್ಷರು, ಅಥವಾ ಅವರ ಪ್ರತಿನಿಯೋಜಕರು, ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್, ಚಿಕ್ಕಮಗಳೂರು.

**ಕಾರ್ಮಿಕ ಪ್ರತಿನಿಧಿಗಳು**

1. ಶ್ರೀ ಗೋವಿಂದೇಗೌಡ, ಐ.ಎನ್.ಟಿ.ಯು.ಸಿ. ಬೆಂಗಳೂರು.
2. ಅಧ್ಯಕ್ಷರು, ಭಾರತೀಯ ಮಜ್ದೂರ್ ಸಂಘ, ಎನ್.ಸಿ. ರಸ್ತೆ, ಬೆಂಗಳೂರು.
3. ಅಧ್ಯಕ್ಷರು, ಹೆಚ್.ಎಂ.ಪಿ. ಕ ನಂ.5, ಮೈ ಟೈಲ್ ಲೇನ್, ಬೆಂಗಳೂರು.
4. ಜನರಲ್ ಸೆಕ್ರೆಟರಿ, ಎ.ಐ.ಟಿ.ಯು.ಸಿ. ಕರ್ನಾಟಕ ಬ್ರಾಂಚ್, ನಂ. 4, ವಿನಾಯಕ ಬಿಲ್ಡಿಂಗ್ಸ, ಸಂಪಂಗಿ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.

**ಸ್ವತಂತ್ರ ಸದಸ್ಯರು.**

1. ಕಾರ್ಮಿಕ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಕಾರ್ಮಿಕ ಆಯುಕ್ತರು, ಜೆ.ಸಿ. ರಸ್ತೆ, ಬೆಂಗಳೂರು.
4. ಶ್ರೀ ಮುನಿಸ್ವಾಮಿ, ವಿಧಾನ ಸಭಾ ಸದಸ್ಯರು.

**ಸ್ವತಂತ್ರ ಮಹಿಳಾ ಸದಸ್ಯರು**

1. ಕುಮಾರಿ ವಿನ್ನಿಪ್ರೆಡ್ ಫರ್ನಾಂಡೀಸ್, ಮಾಡಿ ಶಾಸಕರು, ಕುಂದಾಪುರ, ದಕ್ಷಿಣ ಕನ್ನಡ ಜಿಲ್ಲೆ.
2. ಶ್ರೀಮತಿ ಟಿ. ಕೆಂಪಮ್ಮ, ವಿಧಾನ ಪರಿಷತ್ ಸದಸ್ಯರು, ನಂ. 871, 3ನೇ ಕ್ರಾಸ್, 7ನೇ ಮೈನ್, ಹೆಚ್.ಎ.ಎಲ್. 11ನೇ ಹಂತ, ಇಂದಿರಾನಗರ, ಬೆಂಗಳೂರು.

**ಅಧಿಸೂಚನೆ ಸಂಖ್ಯೆ ಕಾ.ಇ 248 ಎಲ್.ಇ.ಟಿ. 94, ದಿನಾಂಕ 21.3.1995ರ ಪ್ರಕಾರ**

**ಮಾಲೀಕರ ಪ್ರತಿನಿಧಿಗಳು**

1. ಅಧ್ಯಕ್ಷರು, ಫೆಡರೇಷನ್ ಆಫ್ ಕರ್ನಾಟಕ ಚೇಂಬರ್ ಆಫ್ ಕಾಮರ್ಸ ಅಂಡ್ ಇಂಡಸ್ಟ್ರೀಸ್, ಕೆ.ಜಿ.ರಸ್ತೆ, ಬೆಂಗಳೂರು - 560009.
2. ಅಧ್ಯಕ್ಷರು, ದಿ : ಕರ್ನಾಟಕ ಸ್ಟೇಟ್ ಫೆಡರೇಷನ್ ಆಫ್ ಕೋ-ಆಪರೇಟೀವ್ ಷುಗರ್ ಫ್ಯಾಕ್ಟರೀಸ್, ಲಿಮಿಟೆಡ್, 34, 2ನೇ ಮಹಡಿ, 3ನೇ ಕ್ರಾಸ್, ಕುಮಾರ ಪಾರ್ಕ ವೆಸ್ಟ, ಬೆಂಗಳೂರು - 560020.
3. ಅಧ್ಯಕ್ಷರು, ಕರ್ನಾಟಕ ಸ್ಟೇಟ್ ಕೋ-ಆಪರೇಟೀವ್ ಸ್ಪಿನ್ನಿಂಗ್ ಮಿಲ್ಸ ಫೆಡರೇಷನ್ ಲಿಮಿಟೆಡ್, 19/7, ಕನ್ನಿಂಗಹ್ಯಾಂ ರಸ್ತೆ, ಬೆಂಗಳೂರು - 560 052.

4. ಅಧ್ಯಕ್ಷರು, ಕರ್ನಾಟಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ಅಸೋಸಿಯೇಷನ್ 2/106, 13ನೇ ಕ್ರಾಸ್ ಎಂ.ಸಿ. ರಸ್ತೆ, ವಿಜಯನಗರ, ಬೆಂಗಳೂರು - 560 079.

**ಕಾರ್ಮಿಕ ಪ್ರತಿನಿಧಿಗಳು**

1. ಅಧ್ಯಕ್ಷರು, ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೇಸ್ (ಇಂಟಿಕ್) ಕರ್ನಾಟಕ ಶಾಖೆ ಬೆಂಗಳೂರು.

2. ಅಧ್ಯಕ್ಷರು, ಅಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೇಸ್ (ಎಐಟಿಯುಸಿ) ಕರ್ನಾಟಕ ಶಾಖೆ, ನಂ. 4. ವಿನಾಯಕ ಬಿಲ್ಡಿಂಗ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003.

3. ಅಧ್ಯಕ್ಷರು, ಹಿಂದ್ ಮಜ್ದೂರು ಕಿಸಾನ್ ಪಂಚಾಯತ್, ನಂ. 5, ಮಿರ್ಟಿಲ್ ಲೇಸ್, ಬೆಂಗಳೂರು - 560011.

4. ಅಧ್ಯಕ್ಷರು, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ (ಸಿಐಟಿಯು) ಕರ್ನಾಟಕ ಶಾಖೆ, ನಂ. 343, 2ನೇ ಕ್ರಾಸ್, 28ನೇ ಮೇನ್, 9ನೇ ಬ್ಲಾಕ್, ಜಯನಗರ. ಬೆಂಗಳೂರು - 560 011.

**ಸ್ವತಂತ್ರ ಸದಸ್ಯರು**

1. ಮಾನ್ಯ ಕಾರ್ಮಿಕ ಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

2. ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ. ಬೆಂಗಳೂರು - 560 001.

3. ಕರ್ನಾಟಕ ರಾಜ್ಯ ಕಾರ್ಮಿಕ ಆಯುಕ್ತರು, ವಿ.ಐ.ಎಸ್.ಎಲ್. ಕಟ್ಟಡ, ಜೆ.ಸಿ. ರಸ್ತೆ, ಬೆಂಗಳೂರು - 560 002.

4. ಆಯುಕ್ತರು ಮತ್ತು ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಅಥವಾ ಅವರ ಪ್ರತಿನಿಧಿ ವಿಧಾನ ಸೌಧ, ಬೆಂಗಳೂರು - 560 001.

**ಸ್ವತಂತ್ರ ಮಹಿಳಾ ಸದಸ್ಯರು**

1. ಶ್ರೀಮತಿ. ಹೇಮಾವತಿ, ವಿಧಾನ ಸಭಾ ಸದಸ್ಯರು, ಬೆಂಗಳೂರು.

2. ಅಧ್ಯಕ್ಷಿಣಿಯವರು, ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಎಂ.ಜಿ. ರಸ್ತೆ, ಬೆಂಗಳೂರು - 560 001.